## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ-3054-Lumpsum ಅಡಿ ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಹಂಚಿಕೆ ಮಾಡುವ ಕುರಿತು.

ಓದಲಾಗಿದೆ: ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ನೀಡಿರುವ ಆದೇಶ

**ಪ್ರಸ್ತಾವನೆ:**

ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನ ಬಿಡುಗಡೆಗೊಳಿಸುವಂತೆ ಬಂದಿರುವ ಪ್ರಸ್ತಾವನೆಯನ್ನು ಗಮನಿಸಿದೆ.

ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ-3054-Lumpsum ಅಡಿ ಪ್ರಸ್ತಾವಿತ ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನ ವ್ಯಾಪ್ತಿಯ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರವು ತೀರ್ಮಾನಿಸಿರುತ್ತದೆ.

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:66:ಆರ್‌ಆರ್‌ಸಿ:2015, ಬೆಂಗಳೂರು, ದಿನಾಂಕ:8-5-2015**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ-3054-Lumpsum ಅಡಿ **ರೂ.40.00 ಲಕ್ಷಗಳ** (ರೂಪಾಯಿಗಳು ನಲವತ್ತು ಲಕ್ಷಗಳು ಮಾತ್ರ) ಅನುದಾನದಲ್ಲಿ ಕೆಳಕಂಡ ಪ್ರಸ್ತಾವಿತ ಕಾಮಗಾರಿಗಳನ್ನು ಕೈಗೊಳ್ಳಲು ಷರತ್ತುಗಳಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

| ಕ್ರ. ಸಂ. | ಕಾಮಗಾರಿಗಳ ವಿವರಗಳು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | ಹಳಿಯಾಳ ತಾಲ್ಲೂಕಿನ ಕಾಳಗಿನಕೊಪ್ಪ ಜಿಲ್ಲಾ ಮುಖ್ಯ ರಸ್ತೆಯಿಂದ ಅಲ್ಲೊಳ್ಳಿ ಗ್ರಾಮಕ್ಕೆ ಕೂಡು ರಸ್ತೆ ನಿರ್ಮಾಣ (ಚಿಕ್ಕ ನೀರಾವರಿ ಕೆರೆಯ ಏರಿಯ ಮೇಲಿಂದ) | 8.90 |
| 2 | ಹಳಿಯಾಳ ತಾಲ್ಲೂಕಿನ ಖಾಮಡೊಳ್ಳಿ ಗ್ರಾಮದಲ್ಲಿ ಜಿಲ್ಲಾ ಮುಖ್ಯರಸ್ತೆಯಿಂದ ರವಿಕುಮಾರ ಧಾರವಾಡಕರ ಮನೆವರೆಗೆ ಡಾಂಬರೀಕರಣ ಮಾಡುವುದು | 5.85 |
| 3 | ಹಳಿಯಾಳ ತಾಲ್ಲೂಕಿನ ಮಲವಡಿ ಗ್ರಾಮದಲ್ಲಿ ವಿಠ್ಠಲ ದೇವಸ್ಥಾನ ಓಣಿಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ | 6.45 |
| 4 | ಹಳಿಯಾಳ ತಾಲ್ಲೂಕಿನ ಸಾತನಳ್ಳಿ ಗ್ರಾಮದ ಸ್ಮಶಾನಕ್ಕೆ ಹೋಗುವ ರಸ್ತೆಯ ನಿರ್ಮಾಣ | 4.80 |
| 5 | ಜೋಯಿಡಾ ತಾಲ್ಲೂಕು ಕಾತೇಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ | 5.00 |

| | | |
|---|---|---|
| | ವ್ಯಾಪ್ತಿಯ ಮೇಡಕ್ ಕಿರುವತ್ತಿ ರಸ್ತೆ ನಿರ್ಮಾಣ | |
| 6 | ಜೋಯಿಡಾ ತಾಲ್ಲೂಕು ಕಾತೇಲಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಾಟೇಲ್ ಗ್ರಾಮದಿಂದ ತಾಂಡೇಲಿ ಮಹದೇವ ದೇವಸ್ಥಾನದವರೆಗೆ ರಸ್ತೆ ನಿರ್ಮಾಣ | 4.00 |
| 7 | ಜೋಯಿಡಾ ತಾಲ್ಲೂಕು ಕಾತೇಲಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಗೋಕರ್ಡಾದಿಂದ ಕಣಿಮನಿವರೆಗೆ ರಸ್ತೆ ನಿರ್ಮಾಣ | 5.00 |
| | ಒಟ್ಟು: | **40.00** |

ಷರತ್ತುಗಳು:

1. ಉತ್ತರ ಕನ್ನಡ ಜಿಲ್ಲಾ ಪಂಚಾಯತಿಗೆ ಈ ಆದೇಶದಂತೆ ಅನುಮೋದಿಸಿದ ಪ್ರಸ್ತಾವಿತ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ತುರ್ತು ಹಾಗೂ ಅಗತ್ಯತೆ ಆಧಾರದ ಮೇರೆಗೆ ಹಂಚಿಕೆ ಮಿತಿಗೊಳಪಟ್ಟು ಪಂ.ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಅನುಷ್ಠಾನಗೊಳಿಸತಕ್ಕದ್ದು.
2. **ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆರವರು ಎಲ್ಲಾ ಅನುಮೋದಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸುವುದು ಹಾಗೂ ಕಾರ್ಯಪಾಲಕ ಅಭಿಯಂತರರಿಂದ ಪ್ರಗತಿಯ ವರದಿಯನ್ನು ಪಡೆದು ಸರ್ಕಾರಕ್ಕೆ ಕಾಲಕಾಲಕ್ಕೆ ನೀಡತಕ್ಕದ್ದು**
3. ಈ ಆದೇಶದಲ್ಲಿ ಅನುಮೋದಿಸಿರುವ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತಿ/ಕೆಆರ್‌ಐಡಿಎಲ್, ಇತರೆ ಯೋಜನೆಯಡಿ/ಕಾರ್ಯಕ್ರಮದಡಿ/ ಲೆಕ್ಕ ಶೀರ್ಷಿಕೆಯಡಿ ಯಾವುದೇ ಕಾರಣಕ್ಕೂ ಪುನರಾವರ್ತನೆ ಯಾಗಿರುವುದಿಲ್ಲವೆಂಬ ಅಂಶವನ್ನು ದೃಢಪಡಿಸಿಕೊಳ್ಳತಕ್ಕದ್ದು.
4. ಕರ್ನಾಟಕ ಪಾರದರ್ಶಕತೆ ನಿಯಮ 4 ಜಿ ವಿನಾಯಿತಿ ಇಲ್ಲದಿದ್ದಲ್ಲಿ ಕಾಮಗಾರಿಗಳನ್ನು ಕರ್ನಾಟಕ ಪಾರದರ್ಶಕತೆ ಕಾಯಿದೆ ಪ್ರಕಾರ ಟೆಂಡರ್ ಕರೆದು ನಿರ್ವಹಿಸುವುದು.
5. ಈ ಯೋಜನೆಯಡಿಯ ಎಲ್ಲಾ ಕಾಮಗಾರಿಗಳ ಬಳಕೆಯಾದ ಹಣ ಕುರಿತಂತೆ ಮಾಹಿತಿಯನ್ನು ಸರ್ಕಾರಕ್ಕೆ ಹಾಗೂ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ನೀಡುವುದು
6. **ಈ ಆದೇಶದಲ್ಲಿ ಅನುಮೋದಿಸಿರುವ ಕಾಮಗಾರಿಯ ಅಂದಾಜನ್ನು ನಿಯಮಾನುಸಾರ IRC ಮತ್ತಿತರೆ ತತ್ಸಮಾನ ತಾಂತ್ರಿಕ ನಿಬಂಧನೆಗಳಂತೆ ಪರಿಶೀಲನೆಗೆ ಒಳಪಡಿಸಿ ಸೂಕ್ತ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು.**
7. ಕಾಮಗಾರಿಗಳನ್ನು ಪ್ರಾರಂಭಿಸುವ ಮುನ್ನ ಮತ್ತು ಮುಕ್ತಾಯದ ನಂತರ ರಸ್ತೆಯ ಸನ್ನಿವೇಶದ ಛಾಯಾ ಚಿತ್ರಗಳನ್ನು ತೆಗೆದು ವೆಬ್‌ಸೈಟ್ ನಲ್ಲಿ ಅಳವಡಿಸತಕ್ಕದ್ದು.
8. ಪ್ರಸ್ತುತ ಈ ಶೀರ್ಷಿಕೆಯಡಿ ಜಿಲ್ಲಾ ಪಂಚಾಯತಿ ಅನುಷ್ಠಾನಗೊಳಿಸಿರುವ ಹೆಚ್ಚುವರಿ ರಸ್ತೆ ಕಾಮಗಾರಿಯನ್ನು Worksoft works monitoring ಪದ್ಧತಿ ಮುಖಾಂತರ ಉಸ್ತುವಾರಿ ಮಾಡಬೇಕಾಗಿದ್ದು, ಈ ಸಂಬಂಧ ಪೂರ್ಣ ಮಾಹಿತಿಯನ್ನು Worksoft website ನಲ್ಲಿ ತಪ್ಪದೇ ಅಳವಡಿಸತಕ್ಕದ್ದು.
9. ಕಾಮಗಾರಿಯ ಗುಣಮಟ್ಟ ಪರೀಕ್ಷೆಯನ್ನು ಕೆಆರ್‌ಆರ್‌ಡಿಎ ವತಿಯಿಂದ ನಿಗಧಿಪಡಿಸಿರುವ DQM/SQM ಗಳಿಂದ ಪರಿವೀಕ್ಷಣೆ ಮಾಡಿಸತಕ್ಕದ್ದು.
10. ಕಾಮಗಾರಿಯನ್ನು 3rd party /SQM/DQM ರವರಿಂದ ತಪಾಸಣೆಗೆ ಒಳಪಡಿಸತಕ್ಕದ್ದು.
11. 2014-15ನೇ ಸಾಲಿನಿಂದ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಅನುಮೋದನೆಗೊಂಡ ಕ್ರಿಯಾ ಯೋಜನೆಯಲ್ಲಿರುವ ಎಲ್ಲಾ ಯೋಜನೆಗಳ ಎಲ್ಲಾ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿ, ಹಣ ಪಾವತಿಯನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಿಂದ ಪಡೆಯಲಾದ ಪಾವತಿ ಆದೇಶವಿದ್ದಲ್ಲಿ ಮಾತ್ರ ಕಾಮಗಾರಿಗಳ ಬಿಲ್ಲುಗಳ ಪಾವತಿಯನ್ನು

ಕಡ್ಡಾಯವಾಗಿ ಮಾಡುವಂತೆ ಹಾಗೂ ಸರ್ಕಾರದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಈಗಾಗಲೇ ಸೂಚಿಸಲಾಗಿದೆ. ಅದರಂತೆ, ಪ್ರಸ್ತುತ ಈ ಆದೇಶದಲ್ಲಿ ಅನುಮೋದಿಸಿರುವ ಕಾಮಗಾರಿಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವ ನಿಬಂಧನೆಗೊಳಪಡಿಸಿದ

12. ಈ ಆದೇಶದಂತೆ ಜಿಲ್ಲಾ ಪಂಚಾಯತಿ/ಕೆಆರ್‌ಐಡಿಎಲ್ ಅನುಷ್ಠಾನಗೊಳಿಸಿದ ಕಾಮಗಾರಿಗಳಿಗೆ ತಾಲ್ಲೂಕುವಾರು ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ಪ್ರತಿ ಮಾಹೆ ಮುಖ್ಯ ಇಂಜಿನಿಯರ್, ಪಂ.ರಾಜ್ ಇಂಜಿನಿಯರಿಂಗ್ ಇಲಾಖೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ರವರ ಮುಖಾಂತರ ಸರ್ಕಾರಕ್ಕೆ ನೀಡುವುದು.

---

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಆಡಿಟ್-1), ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಆಡಿಟ್-2), ಕರ್ನಾಟಕ, ಬೆಂಗಳೂರು.
4. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು
6. ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
7. ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (PMU)(IF),5ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು
8. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
9. ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಇಲಾಖೆ,ಬೆಂಗಳೂರು.
10. ವಿಶೇಷಾಧಿಕಾರಿಗಳು (ಜಿಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ ವಿಧಾನ ಸೌಧ, ಬೆಂಗಳೂರು
11. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
12. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
14. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಟ್ರೆಜರಿ ಡಿಪಾರ್ಟ್‌ಮೆಂಟ್, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
15. ಜಿಲ್ಲಾ ಖಜಾನಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ.
16. ಅಧೀನ ಕಾರ್ಯದರ್ಶಿಗಳು (ವೆಚ್ಚ-6), ಜಿ.ಪಂ. ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
17. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು-9
18. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ
19. ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಧಾರವಾಡ

20. ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಾರವಾರ/ಸಿರ್ಸಿ.
21. ಮಾಹಿತಿ ಕೇಂದ್ರದ ಗಣಕ ಕೋಶ ಮುಖ್ಯಸ್ಥರು, ಗ್ರಾಅಪಂರಾ ಇಲಾಖೆ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಅಳವಡಿಸಲು ಹಾಗೂ ಗ್ರೂಪ್ ಮೈಲ್ ನಲ್ಲಿ ರವಾನಿಸಲು ಸೂಚಿಸಿದೆ
22. ರಕ್ಷಾ ಕಡತ / ಹೆಚ್ಚುವರಿ ಪ್ರತಿ.